ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ವಿಜಯಪುರ.

ನಂಃಆಡಳಿತಃ /2025. ದಿನಾಂಕಃ 20/09/2025

ಟೆಂಡರ ಪ್ರಕಟಣೆ ಸಂ.04/2025

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆಃ

ಮುದ್ದೇಬಿಹಾಳ ಪಟ್ಟಣದ ಮುದ್ದೇಬಿಹಾಳ ನ್ಯಾಯಾಲಯದ ಆವರಣದಲ್ಲಿರುವ 89.38 ಚದರ ಮೀಟರ ಅಳತೆಯುಳ್ಳ ನೆಲ ಅಂತಸ್ತಿನ ಕಟ್ಟಡವನ್ನು ಕ್ಯಾಂಟಿನ್ ನಡೆಸುವ ಉದ್ದೇಶಕ್ಕಾಗಿ ಬಾಡಿಗೆ ಆಧಾರದ ಮೇಲೆ ಕೊಡುವದಿದ್ದು ಆಸಕ್ತಯುಳ್ಳ ಅರ್ಹ ಅರ್ಜಿದಾರರಿಂದ ಮೊಹರಾದ (ಸೀಲ್ಡ್) ಕೋಟೇಶನ್‌ಗಳನ್ನು ಆಹ್ವಾನಿಸಲಾಗಿದೆ.

ಸದರಿ ಕಟ್ಟಡದಲ್ಲಿ ಕ್ಯಾಂಟಿನ್ ನಡೆಸುವ ಉದ್ದೇಶಕ್ಕಾಗಿ ಕೆಳಕಂಡ ನಿಬಂಧನೆಗೊಳಪಟ್ಟು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮುದ್ದೇಬಿಹಾಳ ಇವರು ನಿಗದಿಪಡಿಸಿದಂತೆ ಹಾಗೂ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಜಯಪುರ ಇವರು ಮೇಲು ರುಜು ಮಾಡಿ ನಿಗದಿ ಪಡಿಸಿದಂತೆ ಪ್ರತಿ ತಿಂಗಳ ಬಾಡಿಗೆ ರೂ.12,500/- ಅಥವಾ ಅದಕ್ಕೆ ಮೇಲ್ಪಟ್ಟು ಕೊಟೇಶನ್ ಸಲ್ಲಿಸುವ ಅರ್ಹ ಅರ್ಜಿದಾರರಿಂದ ಕನಿಷ್ಠ 25,000-00 ರೂ.ಗಳ ಭದ್ರತಾ ಠೇವಣಿ ಪಾವತಿಸುವ ಷರತ್ತಿಗೊಳಪಟ್ಟು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಟೆಂಡರನ್ನು ಕರೆಯಲಾಗಿದೆ.

ನಿಬಂಧನೆಗಳು.

1) ಕ್ಯಾಂಟಿನ್ ನಡೆಸುವ ಅರ್ಹ ಪರವಾನಿಗೆದಾರರು ಪ್ರತಿ ತಿಂಗಳು ಬಾಡಿಗೆಯನ್ನು ಹಿರಿಯ ಶ್ರೇಣಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುದ್ದೇಬಿಹಾಳದಲ್ಲಿ ತುಂಬತಕ್ಕದ್ದು.

2) ಸದರಿ ಜಾಗಕ್ಕೆ 25,000-00 ರೂಃ ಗಳ (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಭದ್ರತಾ ಠೇವಣಿಯನ್ನು ಹಿರಿಯ ಶ್ರೇಣಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುದ್ದೇಬಿಹಾಳದಲ್ಲಿ ಭರಿಸಕತ್ತದ್ದು.

3) ಗುತ್ತಿಗೆಯ ಅವಧಿ ಮುಗಿದ ನಂತರ ಬಾಕಿ ಇರುವ ಬಾಡಿಗೆ, ವಿದ್ಯುತ್ ಹಾಗೂ ನೀರಿನ ಬಿಲ್ ಇತ್ಯಾದಿಗಳನ್ನು ಪಾವತಿಸಿದ ನಂತರ ಹಾಗೂ ಸುಸ್ಥಿತಿಯಲ್ಲಿ ಕಟ್ಟಡವನ್ನು ಖಾಲಿ ಮಾಡಿದ ನಂತರ ಸದರಿ ಭದ್ರತಾ ಠೇವಣಿ ಹಣವನ್ನು ನಿಯಮಾನುಸಾರ ಬಡ್ಡಿರಹಿತವಾಗಿ ಮರಳಿ ಕೊಡಲಾಗುವದು.

4) ಹೊಟೇಲದಲ್ಲಿ ತಯಾರಿಸುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ಪದಾರ್ಥವಾರು ದರಗಳ ಪಟ್ಟಿಯನ್ನು ಅರ್ಜಿಯೊಂದಿಗೆ ಕೊಡತಕ್ಕದ್ದು.

5) ಹೊಟೇಲ ಉದ್ಯಮ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದವರಿಂದ ಪಡೆದ ಪರವಾನಿಗೆ ಪ್ರಮಾಣಪತ್ರ (ಲೈಸನ್ಸ) ಹಾಜರಪಡಿಸತಕ್ಕದ್ದು.

6) ಅರ್ಜಿದಾರರು ಅರ್ಜಿಯೊಂದಿಗೆ ತಮ್ಮ ಇತ್ತೀಚಿನ ಎರಡು ಪಾಸ್ಪೋರ್ಟ ಅಳತೆಯ ಭಾವ ಚಿತ್ರಗಳನ್ನು ಹಾಜರ ಪಡಿಸತಕ್ಕದ್ದು.

7) ಪರವಾನಿಗೆದಾರರೇ ಪ್ರತಿ ತಿಂಗಳು ವಿದ್ಯುತ್‌ಬಿಲ್ಲು, ನೀರಿನ ಕರ ತಪ್ಪದೇ ಪಾವತಿಸತಕ್ಕದ್ದು ಮತ್ತು ಮಾಲಿನ್ಯಕಾರಕ ವಸ್ತುಗಳನ್ನು ತೆಗೆಯುವದು, ಹೊಸ ಜೋಡಣೆಗಳು ಏನಾದರೂ ಇದ್ದಲ್ಲಿ ಅದಕ್ಕೆ ತಗಲುವ ಖರ್ಚನ್ನುಅವರೇ ಭರಿಸತಕ್ಕದ್ದು.

8) ಪರವಾನಿಗೆದಾರರು ಕ್ಯಾಂಟಿನ್ ವ್ಯವಹಾರವನ್ನು ನ್ಯಾಯಾಲಯದ ಕೆಲಸದ ದಿನಗಳಂದು ಬೆಳಗಿನ 7-00 ಘಂಟೆಯಿಂದ ಸಾಯಂಕಾಲ 6-30 ಗಂಟೆಯವರೆಗೆ ಮಾತ್ರ ನಡೆಸತಕ್ಕದ್ದು.

9) ಈಗಿರುವ ಕ್ಯಾಂಟೀನ್ ಕಟ್ಟಡದಲ್ಲಿ ಯಾವುದೇ ಮಾರ್ಪಾಡು ಮಾಡತಕ್ಕದ್ದಲ್ಲ, ಒಂದು ವೇಳೆ ಮಾರ್ಪಾಡು ಮಾಡುವ ಪ್ರಸಂಗ ಬಂದಲ್ಲಿ ಸಂಭಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯತಕ್ಕದ್ದು, ಒಂದು ವೇಳೆ ಪೂರ್ವಾನುಮತಿ ಇಲ್ಲದೇ ಮಾರ್ಪಾಡು ಮಾಡಿದಲ್ಲಿ ಗುತ್ತಿಗೆ ರದ್ದುಪಡಿಸಲಾಗುವದು ಮತ್ತು ಅಂಥವರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲಾಗುವದು.

10) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಇವರ ವಿಳಾಸ ನಮೂದಿಸಿದ ಕೊಟೇಶನ್‌ಗಳನ್ನು **ಮೊಹರಾದ (ಸೀಲ್ಡ್) ಲಕೋಟೆಯಲ್ಲಿ**

ವಿಜಯಪುರ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಸದರಿ ಲಕೋಟೆಯ ಮೇಲೆ ***ಮುದ್ದೇಬಿಹಾಳದ ಕೋರ್ಟ್ ಕ್ಯಾಂಟಿನ ನಡೆಸುವ ಕುರಿತು ಟೆಂಡರ್*** ಎಂದು ದಪ್ಪ ಅಕ್ಷರದಲ್ಲಿ ನಮೂದಿಸಬೇಕು.

11) ಮೊಹರಾದ (ಸೀಲ್ಡ್) ಲಕೋಟೆಯನ್ನು ದಿನಾಂಕಃ 18.10.2025 ರಂದು ಸಂಜೆ 5-00 ಗಂಟೆಯ ಒಳಗಾಗಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಇವರ ಕಛೇರಿಯಲ್ಲಿ ತಲುಪಿಸತಕ್ಕದ್ದು.

12) ಮೊಹರಾದ (ಸೀಲ್ಡ್) ಲಕೋಟೆಯನ್ನು ದಿನಾಂಕಃ 18.10.2025 ರಂದು ಸಂಜೆ 5.30 ಘಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ರವರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ಬೇಡಿಕೆ ಇರುವ ಕೊಟೇಶನ್ ಅನ್ನು ಸ್ವೀಕರಿಸುವ ಅಧಿಕಾರ ಪ್ರಾಧಿಕಾರದವರು ಹೊಂದಿರುತ್ತಾರೆ.

13) ಪರವಾನಗಿ ಅವಧಿ ಪೂರ್ಣಗೊಳ್ಳದಿದ್ದರೂ ಕೂಡ ಸದರಿ ಕ್ಯಾಂಟೀನ್ ಕಟ್ಟಡವನ್ನು ಪ್ರಧಾನ ಜಿಲ್ಲಾ ನ್ಯಾಯಾಧೀಶರು, ವಿಜಯಪುರ ಇವರು ಬಿಟ್ಟು ಕೊಡಲು ನೋಟಿಸು ಕೊಟ್ಟಾಗ 15 ದಿನಗಳ ಒಳಗಾಗಿ ಪರವಾನಿಗೆದಾರರು ಯಾವದೇ ತಕರಾರು ಮಾಡದೇ ಬಿಟ್ಟು ಕೊಡಬೇಕು ಹಾಗೂ ಈ ಕುರಿತು ಯಾವುದೇ ಪರಿಹಾರವನ್ನು ಪರವಾನಗಿದಾರರಿಗೆ ಕೊಡಲಾಗುವದಿಲ್ಲ.

14) ಸದರಿ ಕಟ್ಟಡವನ್ನು ಕ್ಯಾಂಟೀನ್ ನಡೆಸುವ ಉದ್ದೇಶಕ್ಕೆ ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೂ ಬಳಸಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಬೇರೆ ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿದ್ದು ಕಂಡು ಬಂದಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಲಾಗುವದು.

15) ಸದರಿ ಕ್ಯಾಂಟೀನನ್ನು ನಡೆಸುವ ಪರವಾನಿಗೆದಾರರು ನ್ಯಾಯಾಲಯದ ಯಾವುದೇ ಕಾರ್ಯಕಲಾಪಗಳಿಗೆ, ಕಕ್ಷಿದಾರರಿಗೆ, ನ್ಯಾಯವಾದಿಗಳಿಗೆ, ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

16) ಸದರಿ ಕ್ಯಾಂಟೀನ್ ಕಟ್ಟಡದಲ್ಲಿ ಜೀವಕ್ಕೆ ಅಪಾಯಕಾರಕವಾಗುವಂತಹ ಯಾವುದೇ ವಸ್ತುಗಳನ್ನು ಸಂಗ್ರಹಿಸಿ ಇಡತಕ್ಕದ್ದಲ್ಲ.

17) ಸದರಿ ಕ್ಯಾಂಟೀನ್ ಕಟ್ಟಡವನ್ನು ಯಾವತ್ತೂ ಸ್ವಚ್ಛವಾಗಿ ಇಡತಕ್ಕದ್ದು.

18) ಸದರಿ ಕ್ಯಾಂಟೀನ್ ಕಟ್ಟಡವನ್ನು ಅರ್ಜಿದಾರರು ಬೇರೆ ಯಾರಿಗೂ ಉಪ ಬಾಡಿಗೆ ರೂಪದಲ್ಲಿ ಕೊಡತಕ್ಕದ್ದಲ್ಲ.

19) ಸದರಿ ಕಟ್ಟಡವನ್ನು ಪಡೆಯುವಾಗ ಈ ಕೆಳಗೆ ಸಹಿ ಮಾಡಿದವರ ಜೊತೆಯಲ್ಲಿ ನಿಬಂಧನೆಗಳಿಗಣುಗುಣವಾಗಿ ಒಪ್ಪಂದ ಪತ್ರ ಮಾಡಿಕೊಳ್ಳತಕ್ಕದ್ದು.

20) ಸದರಿ ಕ್ಯಾಂಟಿನ್ ನಡೆಸುವ ಗುತ್ತಿಗೆ ಅವಧಿ ಮೂರು (3) ವರ್ಷಗಳವರೆಗೆ ಮಾತ್ರ ಇರುತ್ತದೆ.

21) ಸದರಿ ಗುತ್ತಿಗೆ ಅವಧಿ ಮುಗಿಯುವ (15) ದಿನಗಳ ಒಳಗಾಗಿ ಸದರಿ ಕಟ್ಟಡವನ್ನು ಖಾಲಿ ಮಾಡತಕ್ಕದ್ದು.

ಟೆಂಡರ ದಾಖಲೆಯನ್ನು ಸಲ್ಲಿಸುವ ಕೊನೆಯ ದಿನಾಂಕಃ **18.10.2025** ಸಂಜೆ **5-00** ಘಂಟೆಯವರೆಗೆ ಇರುತ್ತದೆ. ಸ್ವೀಕೃತವಾದ ಟೆಂಡರ್ಗಳನ್ನು ಅದೇ ದಿನ ಅಂದರೆ ದಿನಾಂಕಃ 18.10.2025 ರಂದು ಸಂಜೆ 05-30 ಘಂಟೆಗೆ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ವಿಜಯಪುರ ಇವರ ಕಛೇರಿಯಲ್ಲಿ ಅರ್ಜಿರ್ದಾರರ ಸಮಕ್ಷಮ ತೆರೆಯಲಾಗುವದು.

ಈ ಕೆಳಗೆ ಸಹಿ ಮಾಡಿದವರು ಯಾವದೇ ಕಾರಣವನ್ನು ನೀಡದೇ ಕೊಟೇಶನಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತಾರೆ. ಟೆಂಡರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೆಲಸದ ವೇಳೆಯಲ್ಲಿ ಜಿಲ್ಲಾ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಿ ಪಡೆಯಬಹುದು.

ವಿಜಯಪುರ.

ದಿನಾಂಕಃ 20/09/2025.

(ಹರೀಶ ಎ,)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ ಹಾಗೂ ಟೆಂಡರ್ ಬುಲೆಟಿನ್
ಅಧಿಕಾರಿಗಳು, ವಿಜಯಪುರ.

ಸಂಖ್ಯೆ / ಆಡಳಿತ/ /2025 ಜಿಲ್ಲಾ ನ್ಯಾಯಾಲಯ, ವಿಜಯಪುರ.

ದಿಃ 20/09/2025.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ಕಚೇರಿಯ ಸೂಚನಾ ಫಲಕ ಕ್ಕೆ ಪ್ರಕಟಿಸುವ ಕುರಿತುಃ

1) ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪುರ.
2) ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಜಯಪುರ.
3) ಮಾನ್ಯ ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮುದ್ದೇಬಿಹಾಳ.
4) ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ವಿಜಯಪುರ.
5) ಮಾನ್ಯ ತಹಶೀಲ್ದಾರ್, ಮುದ್ದೇಬಿಹಾಳ.
6) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ಮುದ್ದೇಬಿಹಾಳ.
7) ಮಾನ್ಯ ಮುಖ್ಯ ಅಧಿಕಾರಿಗಳು, ಪುರಸಭೆ, ಮುದ್ದೇಬಿಹಾಳ.
8) ಮಾನ್ಯ ಡಿಪೋ ಮ್ಯಾನೇಜರ್, ಕೆಎಸ್ಆರಟಿಸಿ ಮುದ್ದೆಬಿಹಾಳ ಘಟಕ, ಮುದ್ದೇಬಿಹಾಳ.
9) ಜಿಲ್ಲಾ ವಾರ್ತಾಧಿಕಾರಿಗಳು, ವಾರ್ತಾ ಮತ್ತು ಪ್ರಸರಣ ಇಲಾಖೆ ವಿಜಯಪುರ ರವರಿಗೆ ಪತ್ರಿಕಾ ಪ್ರಕಟಣೆಯ ಕುರಿತು.
10) ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಮುದ್ದೇಬಿಹಾಳ.
11) ಮುದ್ದೆಬಿಹಾಳದ ಹಿರಿಯ ಶ್ರೇಣಿ ಸಿವಿಲ್ ಹಾಗೂ ಜೆಎಂಎಫ್ಸಿ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಲಯ, ಮುದ್ದೇಬಿಹಾಳದ ಸೂಚನಾ ಫಲಕಕ್ಕೆ
12) ವಿಜಯಪುರ ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ
13) ಲೆಕ್ಕ ಪತ್ರ ಶಾಖೆ, ಜಿಲ್ಲಾ ನ್ಯಾಯಾಲಯ, ವಿಜಯಪುರ.
14) ಕಛೇರಿ ಪ್ರತಿ.

ಆದೇಶದ ಮೇರೆಗೆ,

ಮುಖ್ಯ ಆಡಳಿತಾಧಿಕಾರಿಗಳು,
ಜಿಲ್ಲಾ ನ್ಯಾಯಾಲಯ, ವಿಜಯಪುರ.

ANNEXURE-I

To,

The Hon'ble Principal District & Sessions Judge,
VIJAYAPURA.

Sir,

Sub: Submission of Tender for running the canteen...reg.

Ref: Tender Notification No.03/2025, Dtd.20.09.2025.

* * *

I/We, the undersigned, hereby apply for the tender for running a Canteen in Muddebihal Court premises as per terms and conditions prescribed by the Hon'ble Principal District & Sessions Judge, Vijayapura and also agree to execute the agreement.

1.	Name (In Block Letter)		
2.	Full Address		
	i)	Telephone Number	
	ii)	Mobile Number	
	iii)	E-mail ID	
3.	Demand Draft No., Date and amount towards EMD.		
4.	Whether the Firm/Individual listed previously.		
5.	License fee payable per month.		

6.	Statutory details (Photocopy to be attached)		
	a)	Registration Number of the firm.	
	b)	PAN Number	
	c)	GST Registration Number	
	d)	TIN Number	

Place:

Date:

Name & Signature of the Tenderer

(With seal)

ANNEXURE-II

(PROPOSED PRICE LIST OF EATABLES)

Sl. No.	Name of the Item.	Quantity (ml/grams) & Rate		
		Quantity	Rate	
			Rs.	Ps.

Place:

Date:

Name & Signature of the Tenderer

(With seal)